ತಂತಿ ವಿಳಾಸ: ಯೂನಿರೆಜ್
ದೂರವಾಣಿ ಸಂಖ್ಯೆ: 2419677/2419361
ಫ್ಯಾಕ್ಸ್: 0821-2419363/2419301

e-mail: registrar@uni-mysore.ac.in
www.uni-mysore.ac.in

# ಮೈಸೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಸೌಧ
ಕ್ರಾಫರ್ಡ್‌ಭವನ, ಮೈಸೂರು

ಸಂಖ್ಯೆ:ಜಿಎಲ್13/137/2022–23

ದಿನಾಂಕ.22–05–2025

## ಸುತ್ತೋಲೆ

ವಿಷಯ: ಬಾಬಾಸಾಹೇಬ್ ಡಾ. ಬಿ.ಆರ್. ಅಂಬೇಡ್ಕರ್ ಅವರ ಕೇಂದ್ರದ ರಜತ ಮಹೋತ್ಸವ ಹಾಗೂ ನೂತನ ಜ್ಞಾನದರ್ಶನ ಕಟ್ಟಡದ ಗ್ರಂಥಾಲಯ ಉದ್ಘಾಟನೆ ಕಾರ್ಯಕ್ರಮಕ್ಕೆ ಹಾಜರಾಗುವ ಬಗ್ಗೆ.

ಉಲ್ಲೇಖ: ನಿರ್ದೇಶಕರು, ಡಾ. ಬಿ.ಆರ್. ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರ, ಮಾ.ಗಂ, ಮೈಸೂರು ಇವರ ಪತ್ರದ ಸಂಖ್ಯೆ.ಮಾಗಂ/60/ಎಆರ್‌ಇಸಿ/2025–26, ದಿನಾಂಕ.17.05.2025.

–:–

ದಿನಾಂಕ 24.05.2025ರಂದು ಮಧ್ಯಾಹ್ನ 3.00 ಗಂಟೆಗೆ ಡಾ. ಬಿ.ಆರ್. ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣ ಕೇಂದ್ರದ ರಜತ ಮಹೋತ್ಸವ, ನೂತನ ಜ್ಞಾನದರ್ಶನ ಗ್ರಂಥಾಲಯ ಕಟ್ಟಡದ ಉದ್ಘಾಟನೆ ಹಾಗೂ ಡಾ. ಬಿ.ಆರ್. ಅಂಬೇಡ್ಕರ್‌ರವರ ಸಾಕ್ಷ್ಯ ಚಿತ್ರ ಬಿಡುಗಡೆ ಕಾರ್ಯಕ್ರಮವನ್ನು ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದಲ್ಲಿ ಆಯೋಜಿಸಲಾಗಿದೆ. ಸದರಿ ಕಾರ್ಯಕ್ರಮಕ್ಕೆ ಕರ್ನಾಟಕ ರಾಜ್ಯದ ಸನ್ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಸಿದ್ಧರಾಮಯ್ಯರವರು, ಉನ್ನತ ಶಿಕ್ಷಣ ಸಚಿವರಾದ ಡಾ. ಎಂ.ಸಿ. ಸುಧಾಕರ್‌ರವರು, ಸಮಾಜ ಕಲ್ಯಾಣ ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರಾದ ಡಾ. ಹೆಚ್.ಸಿ. ಮಹದೇವಪ್ಪರವರು ಹಾಗೂ ಜಿಲ್ಲೆಯ ಜನಪ್ರತಿನಿಧಿಗಳು ಆಗಮಿಸುತ್ತಿದ್ದಾರೆ. ಪ್ರೊ. ಎನ್.ಕೆ. ಲೋಕನಾಥ್, ಮಾನ್ಯ ಕುಲಪತಿಗಳು, ಮೈಸೂರು ವಿಶ್ವವಿದ್ಯಾನಿಲಯ ಇವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ.

ಈ ಹಿನ್ನೆಲೆಯಲ್ಲಿ ವಿಶ್ವವಿದ್ಯಾನಿಲಯದ ಎಲ್ಲಾ ಬಟವಾಡೆ ಅಧಿಕಾರಿಗಳು, ಸ್ನಾತಕ/ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಬೋಧಕ ವರ್ಗದವರು, ಅಧ್ಯಾಪಕೇತರ ಉದ್ಯೋಗಿಗಳು/ಅತಿಥಿ ಉಪನ್ಯಾಸಕರು/ಸಂಶೋಧಕರು ಹಾಗೂ ವಿದ್ಯಾರ್ಥಿಗಳು ದಿನಾಂಕ 24.05.2025ರಂದು ಮಧ್ಯಾಹ್ನ 2:30 ಗಂಟೆಗೆ ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದಲ್ಲಿ ಕಡ್ಡಾಯವಾಗಿ ಭಾಗವಹಿಸಬೇಕಾಗಿ ತಿಳಿಸಲಾಗಿದೆ.

<u>ವಿಶೇಷ ಸೂಚನೆ:</u> **ಮೈಸೂರು ವಿಶ್ವವಿದ್ಯಾನಿಲಯದ ಆಯಾ ಸ್ನಾತಕೋತ್ತರ ಅಧ್ಯಯನ ವಿಭಾಗಗಳ/ಕಾಲೇಜುಗಳ ಮುಖ್ಯಸ್ಥರು/ಬಟವಾಡೆ ಅಧಿಕಾರಿಗಳು ಈ ಉದ್ದೇಶಕ್ಕಾಗಿ ಒಬ್ಬರು ನೋಡಲ್ ಅಧಿಕಾರಿಯನ್ನು ನೇಮಿಸಿಕೊಂಡು ಎಲ್ಲರೂ ಈ ಕಾರ್ಯಕ್ರಮದಲ್ಲಿ ಕಡ್ಡಾಯವಾಗಿ ಭಾಗವಹಿಸುವಂತೆ ಕ್ರಮವಹಿಸುವುದು. ನೋಡಲ್ ಅಧಿಕಾರಿಯು ಹಾಜರಾಗುವವರಿಂದ ಹಾಜರಾತಿ ಪಡೆದು ಅದರ ಪ್ರತಿಯನ್ನು ಕುಲಸಚಿವರ ಕಛೇರಿಗೆ ಅದೇ ದಿನ ದೃಢೀಕರಿಸಿ ಸಲ್ಲಿಸುವ ಜವಾಬ್ದಾರಿಯನ್ನು ನಿರ್ವಹಿಸತಕ್ಕದ್ದು.**

ಕುಲಸಚಿವರು

**ಕುಲಸಚಿವರು**
**ಮೈಸೂರು ವಿಶ್ವವಿದ್ಯಾನಿಲಯ**
**ಮೈಸೂರು-570 005**

ಗೆ,

1. ನಿರ್ದೇಶಕರು, ಡಾ. ಬಿ.ಆರ್. ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರ, ಮಾನಸಗಂಗೋತ್ರಿ, ಮೈಸೂರು.
2. ಎಲ್ಲಾ ಸ್ನಾತಕ/ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಅಧ್ಯಕ್ಷರು/ನಿರ್ದೇಶಕರು, ಸಂಯೋಜನಾಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
3. ವಿಶ್ವವಿದ್ಯಾನಿಲಯದ ಅಧೀನಕ್ಕೊಳಪಟ್ಟ ಎಲ್ಲಾ ಕಾಲೇಜುಗಳ ಪ್ರಾಂಶುಪಾಲರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
4. ಎಲ್ಲಾ ಬಟವಾಡೆ ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
5. ಆಡಳಿತಾಧಿಕಾರಿಗಳು, ಮಾನಸಗಂಗೋತ್ರಿ, ಮೈಸೂರು.
6. ಸಂಯೋಜಕರು, ಐ.ಸಿ.ಡಿ ಗಣಕ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು – ಸದರಿ **ಸುತ್ತೋಲೆಯನ್ನು ಮೈಸೂರು ವಿಶ್ವವಿದ್ಯಾನಿಲಯದ ಜಾಲತಾಣದಲ್ಲಿ ಪ್ರಕಟಿಸುವುದು.**
7. ಮಾನ್ಯ ಕುಲಪತಿಯವರ/ಕುಲಸಚಿವರು/ಕುಲಸಚಿವರು(ಪರೀಕ್ಷಾಂಗ)/ಹಣಕಾಸು ಅಧಿಕಾರಿಯವರ ಆಪ್ತಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
8. ಕಛೇರಿ ಪ್ರತಿ.

ಪು.ತಿ.ನೋ

## ಮೈಸೂರು ವಿಶ್ವವಿದ್ಯಾನಿಲಯ

---------------ಕಛೇರಿ / ಅಧ್ಯಯನ ವಿಭಾಗ

| ಕ್ರ.ಸಂ. | ಖಾಯಂ ಬೋಧಕರು / ಅತಿಥಿ ಉಪನ್ಯಾಸಕರು | ಮಧ್ಯಾಹ್ನ 1.30 ಗಂಟೆಗೆ ಸಹಿ | ಕಾರ್ಯಕ್ರಮ ಮುಗಿದ ನಂತರ ಸಹಿ |
|---|---|---|---|
| 1 | | | |
| 2 | | | |
| 3 | | | |

ವಿಭಾಗದ ಮುಖ್ಯಸ್ಥರ ಸಹಿ

## ಮೈಸೂರು ವಿಶ್ವವಿದ್ಯಾನಿಲಯ

---------------ಕಛೇರಿ / ಅಧ್ಯಯನ ವಿಭಾಗ

| ಕ್ರ.ಸಂ. | ಖಾಯಂ ಅಧ್ಯಾಪಕೇತರರು /ತಾತ್ಕಾಲಿಕ ಅಧ್ಯಾಪಕೇತರರು | ಮಧ್ಯಾಹ್ನ 1.30 ಗಂಟೆಗೆ ಸಹಿ | ಕಾರ್ಯಕ್ರಮ ಮುಗಿದ ನಂತರ ಸಹಿ |
|---|---|---|---|
| 1 | | | |
| 2 | | | |
| 3 | | | |

ವಿಭಾಗದ ಮುಖ್ಯಸ್ಥರ ಸಹಿ